ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ಪ್ರವಾಹ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 18/10/20

# ಪ್ರವಾಹ ಸಂಕಷ್ಟಕ್ಕೆ ಪ್ರಧಾನಿ ಸ್ಪಂದನೆ

18/10/20

**ಸಂ.ಕ. ಸಮಾಚಾರ ಮೈಸೂರು**



ರಾಜ್ಯ ಈಗ ತೀವ್ರ ಪ್ರವಾಹ ಸಮಸ್ಯೆ ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಪರಿಹಾರ ಕಾರ್ಯಕ್ಕೆ ಎಲ್ಲ ರೀತಿಯ ನೆರವು ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ನಗರದ ಚಾಮುಂಡಿಬೆಟ್ಟದಲ್ಲಿ ನಡೆದ ದಸರಾ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿ, ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳು ಪ್ರವಾಹಕ್ಕೆ ಒಳಗಾಗಿವೆ.

ಈ ಹಿನ್ನೆಲೆಯಲ್ಲಿ ಪ್ರಧಾನಿ ಕರೆ ಮಾಡಿ ನೆರವಿನ ಭರವಸೆ ನೀಡಿದ್ದಾರೆ ಎಂದರು. ಜೊತೆಗೆ, ಕಲ್ಬುರ್ಗಿಯ ಪ್ರವಾಹ ಪ್ರದೇಶದಲ್ಲಿ ಜನರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ. ರಾಜ್ಯದ 51,700 ರೈತರ ಬೆಳೆ ಪರಿಹಾರಕ್ಕಾಗಿ ಒಟ್ಟು 36.500 ಕೋಟಿ ರೂ. ಜಮಾ ಮಾಡಲಾಗಿದೆ. ಆಗಸ್ಟ್‌ನಲ್ಲಿ ಉಂಟಾದ ಪ್ರವಾಹದಿಂದ ಒಟ್ಟು 9,952 ಕೋಟಿ ರೂ. ನಷ್ಟ ಉಂಟಾಗಿದೆ ಎಂದು ಮಾಹಿತಿ ನೀಡಿದರು.

ಕೋವಿಡ್‌ತುರ್ತು ಪರಿಸ್ಥಿತಿಯ ನಡುವೆ ವೈದ್ಯರು ನೀಡಿದ ಸೇವೆಯನ್ನು ಸರ್ಕಾರ ಗಮನಿಸಿ ಈ ಬಾರಿ ಹಬ್ಬವನ್ನು ವೈದ್ಯರಿಂದ ಉದ್ಘಾಟನೆ ಮಾಡಿಸಿದ್ದು, ಈ ಸಂಕಷ್ಟದಲ್ಲಿ ನಾಡಹಬ್ಬದ ಇತಿಹಾಸಕ್ಕೆ ಕುಂದು ಉಂಟಾಗದಂತೆ ಆಚರಿಸಲಾಗುತ್ತಿದೆ ಎಂದರು.

**ಈ ವರ್ಷ ಲಸಿಕೆ ಸಿಗಲ್ಲ**

ಈ ವರ್ಷ ಕೊರೊನಾಕ್ಕೆ ಲಸಿಕೆ ಸಿಗಲ್ಲ. ಮುಂದಿನ ವರ್ಷ ಇದು ಲಭಿಸಲಿದ್ದು ಅಲ್ಲಿಯವರೆಗೆ ನಾವು ನಿಯಮ ಪಾಲಿಸಿಕೊಂಡೇ ಕೊರೊನಾ ವಿರುದ್ಧ ಹೋರಾಡಬೇಕಾಗಿದೆ ಎಂದು ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಮೈಸೂರು ದಸರಾ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿ, ಸಾರ್ವಜನಿಕರು ಮಾತನಾಡುವಾಗ ಸಹಾ ಮಾಸ್ಕ್ ತೆಗೆಯಬಾರದು, ಆತಂಕಗೊಳ್ಳದೇ ಎಚ್ಚರಿಕೆಯಿಂದ ರೋಗವನ್ನು ಎದುರಿಸಬೇಕು ಎಂದರು.

ಸುಮಾರು 500 ವೈದ್ಯರು, 700 ಮಂದಿ ಶುಶ್ರೂಷಕರು ಹಾಗೂ ತಂತ್ರಜ್ಞರು ಸ್ವತಃ ಕೊರೊನಾಗೆ ಇದುವರೆಗೆ ಬಲಿಯಾಗಿದ್ದಾರೆ. ಇವರನ್ನೆಲ್ಲಾ ಹುತಾತ್ಮರೆಂದೇ ಪರಿಗಣಿಸಬೇಕು. ಈಗಲೂ ಹೋರಾಡುತ್ತಿರುವವರಿಗೆ ಸರ್ಕಾರ ಪ್ರಶಂಸನಾ ಪತ್ರ ನೀಡಬೇಕು, ವೈದ್ಯರ ಮೇಲಿನ ಹಲ್ಲೆ ತಡೆಯಬೇಕೆಂದು ಕೋರಿದರು.